# ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೊಳಪಟ್ಟಿದೆ)

(CIN: U04010KA2002SGC030438)

## ಸಾರ್ವಜನಿಕ ವಿದ್ಯುತ್ ವಾಹನಗಳ ಚಾರ್ಜಿಂಗ್ ಬಗ್ಗೆ ನ್ಯಾಷನಲ್ ಆನ್‌ಲೈನ್ ಡೇಟಾಬೇಸ್‌ಗೆ ಮಾಹಿತಿ ಸಲ್ಲಿಸಲು ಚಾರ್ಜ್ ಪಾಯಿಂಟ್ ಆಪರೇಟರ್‌ಗಳಿಗೆ ಸೂಚನೆ

ಭಾರತ ಸರ್ಕಾರದ ಇಂಧನ ಸಚಿವಾಲಯವು ವಿದ್ಯುತ್ ವಾಹನಗಳಿಗೆ ಚಾರ್ಜಿಂಗ್ ಮೂಲಸೌಲಭ್ಯದ ಬಗ್ಗೆ ಪತ್ರದ ಸಂಖ್ಯೆ.12/02/2018–ಇವಿ (ಸಿಎಂಪಿ. ನಂ. 244347) ದಿನಾಂಕ: 14ನೇ ಜನವರಿ 2022ರ ಅನ್ವಯ ಪರಿಷ್ಕೃತ ಕ್ರೋಢೀಕೃತ ಮಾರ್ಗಸೂಚಿಗಳು ಮತ್ತು ಗುಣಮಟ್ಟಗಳನ್ನು ("ಮಾರ್ಗಸೂಚಿಗಳು") ಹೊರಡಿಸಿದೆ. ಮೇಲೆ ತಿಳಿಸಿದ ಮಾರ್ಗಸೂಚಿಗಳ ಕಲಂ (ii) ರ ಅನ್ವಯ, ದೇಶದಲ್ಲಿ ವಿದ್ಯುತ್ ವಾಹನಗಳ ಸಾರ್ವಜನಿಕ ಚಾರ್ಜಿಂಗ್ ಮೂಲಸೌಲಭ್ಯದ ಪ್ರಾರಂಭಕ್ಕಾಗಿ ಬ್ಯೂರೋ ಆಫ್ ಎನರ್ಜಿ ಎಫಿಸಿಯೆನ್ಸಿ (ಬಿಇಇ) ಅನ್ನು ಸೆಂಟ್ರಲ್ ನೋಡಲ್ ಏಜೆನ್ಸಿಯನ್ನಾಗಿ ನಿಯೋಜನೆ ಮಾಡಲಾಗಿದೆ. ಕರ್ನಾಟಕದಲ್ಲಿ ವಿದ್ಯುತ್ ವಾಹನಗಳಿಗೆ ಚಾರ್ಜಿಂಗ್ ಮೂಲಸೌಲಭ್ಯ ಸೃಷ್ಟಿಸಲು ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತವನ್ನು (ಬೆಸ್ಕಾಂ) ಕರ್ನಾಟಕ ಸರ್ಕಾರದ ಅಧಿಸೂಚನೆ ದಿನಾಂಕ 28.12.2018ರ ಅನ್ವಯ ರಾಜ್ಯ ನೋಡಲ್ ಏಜೆನ್ಸಿಯನ್ನಾಗಿ ನಿಯೋಜನೆ ಮಾಡಲಾಗಿದೆ.

ಮೇಲೆ ತಿಳಿಸಿರುವ ಮಾರ್ಗಸೂಚಿಯು ಈ ಕೆಳಕಂಡ ಅಂಶಗಳನ್ನು ಪ್ರತಿಪಾದಿಸುವುದು:

- ✓ **ಕಲಂ 3.1 (ix):** ಪ್ರತಿಯೊಂದು ಸಾರ್ವಜನಿಕ ಇವಿ ಚಾರ್ಜಿಂಗ್ ಕೇಂದ್ರವು ಚಾರ್ಜಿಂಗ್ ಕೇಂದ್ರದ ಅಂಕಿ ಅಂಶಗಳನ್ನು ಸೂಕ್ತ ರಾಜ್ಯ ನೋಡಲ್ ಏಜೆನ್ಸಿಗೆ ತಿಳಿಸತಕ್ಕದ್ದು ಮತ್ತು ಬಿಇಇ ನಿಗದಿಪಡಿಸಿರುವಂತೆ ಶಿಷ್ಟಾಚಾರವನ್ನು ಪಾಲಿಸತಕ್ಕದ್ದು.
- ✓ **ಕಲಂ 3.3:** ಸ್ಪಷ್ಟಪಡಿಸುವುದೇನೆಂದರೆ ಸಾರ್ವಜನಿಕ ಚಾರ್ಜಿಂಗ್ ಮೂಲಸೌಲಭ್ಯ ಅಗತ್ಯತೆಗಳು ವೈಯಕ್ತಿಕ ಇವಿ ಮಾಲೀಕರ ಸ್ವಂತ ಉಪಯೋಗಕ್ಕೆ ಮಾಡಿಕೊಂಡಿರುವ (ವಾಣಿಜ್ಯೇತರ) ಖಾಸಗಿ ಚಾರ್ಜಿಂಗ್ ಕೇಂದ್ರಗಳಿಗೆ ಅನ್ವಯವಾಗುವುದಿಲ್ಲ.
- ✓ **ಕಲಂ 3.5:** ಗೃಹನಿರ್ಮಾಣ ಸಂಘಗಳು, ಮಾಲ್‌ಗಳು, ಕಚೇರಿ ಸಂಕೀರ್ಣಗಳು, ರೆಸ್ಟೋರೆಂಟ್‌ಗಳು, ಹೋಟೆಲ್‌ಗಳು ಇತ್ಯಾದಿಗಳು ಅವರ ಆವರಣಕ್ಕೆ ಬರುವ ಸಂದರ್ಶಕರ ವಾಹನಗಳಿಗೆ ಚಾರ್ಜಿಂಗ್ ಮಾಡಿಸಿಕೊಳ್ಳುವುದಕ್ಕೆ ಅವಕಾಶ ನೀಡುವ ವ್ಯವಸ್ಥೆಯೊಡನೆ ಸಾರ್ವಜನಿಕ ಚಾರ್ಜಿಂಗ್ ಕೇಂದ್ರಗಳನ್ನು ಸ್ಥಾಪಿಸಬಹುದಾಗಿರುತ್ತದೆ.

ಬ್ಯೂರೋ ಆಫ್ ಎನರ್ಜಿ ಎಫಿಸಿಯೆನ್ಸಿಯು ಕೇಂದ್ರ ನೋಡಲ್ ಏಜೆನ್ಸಿಯಾಗಿ ತನ್ನ ಸಾಮರ್ಥ್ಯದಲ್ಲಿ ಸಮೀಪದ ಸಾರ್ವಜನಿಕ ಇವಿ ಚಾರ್ಜರ್‌ಗೆ ವಾಹನಗಳಿಗೆ ಮಾರ್ಗ ಸೂಚಿಸುವ ಸೌಲಭ್ಯಕ್ಕಾಗಿ ನ್ಯಾಷನಲ್ ವೆಬ್ ಪೋರ್ಟಲ್ ಮತ್ತು ಮೊಬೈಲ್ ಅಪ್ಲಿಕೇಶನ್ ಒಂದನ್ನು, ಸಾರ್ವಜನಿಕ ಇವಿ ಚಾರ್ಜಿಂಗ್ ಕೇಂದ್ರದ ನೋಂದಣಿಗೆ ವೆಬ್ ಪೋರ್ಟಲ್ ಒಂದನ್ನು ಮತ್ತು ಸಿಪಿಒಗಳು ತಮ್ಮ ಚಾರ್ಜಿಂಗ್ ವಿವರಗಳನ್ನು ಸುರಕ್ಷಿತವಾಗಿ ನ್ಯಾಷನಲ್ ಆನ್‌ಲೈನ್ ಡೇಟಾಬೇಸ್‌ಗೆ ದಾಖಲಿಸಲು ಸಾಧ್ಯವಾಗುವಂತೆ ಆನ್‌ಲೈನ್ ವೆಬ್–ಪೋರ್ಟಲ್ ಒಂದನ್ನು ಅಭಿವೃದ್ಧಿಪಡಿಸಿದೆ.
ಆದ್ದರಿಂದ ಈಗ ಮೇಲೆ ತಿಳಿಸಿರುವ ಮಾರ್ಗಸೂಚಿಗಳ ಅನುಸಾರ, ಕರ್ನಾಟಕದ ಯಾವುದೇ ಸ್ಥಳಗಳಲ್ಲಿ ಸರ್ಕಾರದ ಬೆಂಬಲದೊಡನೆ ಅಥವಾ ಬೆಂಬಲವಿಲ್ಲದೆ (ಹಣಕಾಸು/ಇನ್ನಿತರೆ) ಸ್ಥಾಪಿಸಿರುವ ಸಾರ್ವಜನಿಕ ಇವಿ ಚಾರ್ಜಿಂಗ್ ಕೇಂದ್ರಗಳು, ಬ್ಯಾಟರಿ ಸ್ವಾಪಿಂಗ್ ಅಥವಾ ಬ್ಯಾಟರಿ ಚಾರ್ಜಿಂಗ್ ಕೇಂದ್ರಗಳನ್ನು ನಡೆಸುತ್ತಿರುವ ಎಲ್ಲಾ ಸಂಸ್ಥೆಗಳು ಬಿಇಇ ಇವರಿಂದ ಅಭಿವೃದ್ಧಿಪಡಿಸಿರುವ ನ್ಯಾಷನಲ್ ವೆಬ್ ಪೋರ್ಟಲ್‌ಗೆ ಸಕಾಲೀಕರಣಗೊಳಿಸಲು ಸಂಬಂಧಪಟ್ಟ ಎಸ್‌ಎನ್‌ಎ ಮೂಲಕ ಆನ್‌ಲೈನ್‌ನಲ್ಲಿ ದಿನಾಂಕವನ್ನು ಸಲ್ಲಿಸಬೇಕಾಗಿದೆ/ ಸಕಾಲಿಕಗೊಳಿಸಬೇಕಾಗಿದೆ.
ಆದ್ದರಿಂದಾಗಿ ಎಲ್ಲಾ ಸಾರ್ವಜನಿಕ ಚಾರ್ಜಿಂಗ್ ಕೇಂದ್ರಗಳ ಆಪರೇಟರುಗಳು (ಖಾಸಗಿ/ಸಾರ್ವಜನಿಕ ಸಂಸ್ಥೆಗಳು) ಮೇಲೆ ತಿಳಿಸಿರುವ ಮಾರ್ಗಸೂಚಿಗಳನ್ನು ಅನುಸರಿಸಬೇಕಾಗಿ ಮತ್ತು ನೋಂದಾಯಿಸಬೇಕಾಗಿ ಹಾಗೂ **www.evyatra.beeindia.gov.in** ಇಲ್ಲಿ ದೊರೆಯುವ ವೆಬ್ ಪೋರ್ಟಲ್‌ಗೆ ಲಾಗಿಂಗ್ ಮಾಡುವ ಮೂಲಕ **www.evyatra.beeindia.gov.in/bee-ev-web/register-charging-point-operator** ಇಲ್ಲಿ ಲಭ್ಯವಿರುವ ನಮೂನೆ ಅನ್ವಯ ವಾರದ ಆಧಾರದ ಮೇಲೆ ಅಗತ್ಯವಾದ ವಿವರವಾದ ಮಾಹಿತಿಯನ್ನು ಒದಗಿಸಬೇಕಾಗಿ ಸಲಹೆ ನೀಡಲಾಗಿದೆ.

ಸಹಿ/- ವ್ಯವಸ್ಥಾಪಕ ನಿರ್ದೇಶಕರು, ಬೆಸ್ಕಾಂ

ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆ ಮಾಡಿ: 1912

ಬೆಸ್ಕಾಂ ಮಿತ್ರ ಮೊಬೈಲ್ APP Download ಮಾಡಿಕೊಳ್ಳಿ

Scanned with CamScanner